**ಸಾಕ್ಷಿಯನ್ನು ದಿಃ *22/11/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ.**
ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| ನಿ.ಪಿ.17 | ಯುನಿಯನ ಬ್ಯಾಂಕ ಆಫ್ ಇಂಡಿಯಾರವರು ದಿಃ12-11-2024 ರಂದು ನೀಡಿರುವ ಬಸವರಾಜ ಎನ ಹಳ್ಳಿಕೇರಿ ಇವರ ಬ್ಯಾಂಕ ಖಾತೆಯ ವಿವರಗಳ ಪಟ್ಟಿ |

ಆದುದರಿಂದ ಪ್ರಮಾಣಪತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಿ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿ.

***ಪಾಟೀ ಸವಾಲು ಃ 2 ನೇ ಎದುರುದಾರರ ಪರ ವಕೀಲರಿಂದ.***

ಅಪಘಾತವು ದಿಃ27-01-2021 ರಂದು ಆಗಿರುತ್ತದೆ ಎಂದರೆ ನಿಜ. ಅಪಘಾತವಾದ ಆರು ದಿನಗಳ ನಂತರ ದೂರನ್ನು ನೀಡಿರುತ್ತೇವೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾವು ಆಸ್ಪತ್ರೆಯಲ್ಲಿರುವ ಕಾರಣ ದೂರು ನೀಡಲು ತಡವಾಯಿತು ಎಂದು ಉತ್ತರಿಸುತ್ತಾರೆ. ಸದರಿ ಅಪಘಾತವನ್ನು ನಾನು ನೋಡಿಲ್ಲ. ಅಪಘಾತದ ಕುರಿತು ಆಸ್ಪತ್ರೆಯವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಇಲ್ಲವೂ ನನಗೆ ಗೊತ್ತಿಲ್ಲ. ನನ್ನ ಪತಿಯ ಸಾವಿಗೆ ಮತ್ತು ಸದರಿ ಅಪಘಾತಕ್ಕೂ ಸಂಬಂಧವಿಲ್ಲದೆ ಇರುವುದರಿಂದ ಆಸ್ಪತ್ರೆಯವರು ಪೊಲೀಸರಿಗೆ ಅಪಘಾತದ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಮೃತರಿಗೆ 65 ವರ್ಷಕ್ಕಿಂತ ಹೆಚ್ಚು ವಯಸ್ಸು ಇದ್ದರೂ ಸಹ 62 ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೃತ ಪತಿ ಕೆಐಎಡಿಬಿಯ ನಿವೃತ್ತ ನೌಕರರು ಇದ್ದು, ಸಾಯುವ ಸಮಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿ ಮಾಸಿಕ 55 ಸಾವಿರ ರೂಪಾಯಿ ಸಂಬಳ ಪಡೆಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿ ತಿಂಗಳಿಗೆ 55 ಸಾವಿರ ರೂಪಾಯಿ ಸಂಬಳ ಪಡೆಯುತ್ತಿದ್ದರು ಎಂದು ತೋರಿಸಲು ದಾಖಲೆಗಳು ಇವೆ, ಹಾಜರುಪಡಿಸುತ್ತೇನೆ.

ನನಗೆ ಇಬ್ಬರೂ ಮಕ್ಕಳು ಎಂದರೆ ನಿಜ. ನನ್ನ ಹಿರಿಯ ಮಗ ಇಂಜಿನಿಯರ ಆಗಿ ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ನನ್ನ ಮಗನ ವೃತ್ತಿ ಇಂಜಿನಿಯರ ಎಂದು ಬರೆಸಿದ್ದು ಇರುತ್ತದೆ ಎಂದರೆ ಅವನು ಇಂಜಿನಿಯರಿಂಗ ಓದುತ್ತಿದ್ದಾ ಎಂದು ಹೇಳುತ್ತಾರೆ. ನನ್ನ ಇಬ್ಬರೂ ಮಕ್ಕಳು ದುಡಿಯುತ್ತಿರುವ ಕಾರಣ ನಾನು ನನ್ನ ಗಂಡನ

ಆದಾಯದ ಮೇಲೆ ಅವಲಂಬಿತವಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ನನ್ನ ಗಂಡ ತೀರಿಹೋದ ನಂತರ ನನಗೆ ತಿಂಗಳಿಗೆ 17 ಸಾವಿರದ ಚಿಲ್ಲರೆ ರೂಪಾಯಿ ಕುಟುಂಬ ಪಿಂಚಣಿ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು 28 ಸಾವಿರ ರೂಪಾಯಿ ಪಿಂಚಣಿ ಬರುತ್ತದೆ ಎಂದು ಉತ್ತರಿಸುತ್ತಾರೆ. ಈ ರೀತಿ ನನ್ನ ಇಬ್ಬರೂ ಮಕ್ಕಳ ಆದಾಯ ಮತ್ತು ನಮ್ಮ ಕುಟುಂಬ ಪಿಂಚಣಿಯಿಂದ ನನಗೆ ಆರ್ಥಿಕ ಅಡಚಣೆವಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಮಕ್ಕಳ ಓದಿಗೆ ಸಾಕಷ್ಟು ಸಾಲ ಮಾಡಿದ್ದು ಮತ್ತು ನಮಗೆ ಸ್ವಂತ ಮನೆ ಸಹ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಪಿಂಚಣಿ ಕುರಿತು ಹಾಜರುಪಡಿಸಿರುವ ದಾಖಲಾತಿಗಳು ಖೊಟ್ಟಿ ದಾಖಲಾತಿಗಳು ಎಂದರೆ ಸರಿಯಲ್ಲ.

ಅಪಘಾತ ಸಮಯದಲ್ಲಿ ನನ್ನ ಪತಿ ಮೋಟಾರುಸೈಕಲ ಚಲಾಯಿಸುತ್ತಿದ್ದರು ಎಂದರೆ ನಿಜ. ಸದರಿ ಅಪಘಾತವು ಬಸ್ಸು ಮತ್ತು ಮೋಟಾರುಸೈಕಲ ನಡುವೆ ಮುಖಾಮುಖಿಯಾಗಿ ಡಿಕ್ಕಿ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಬೇಂದ್ರೆ ಬಸ್ಸು ಮೋಟಾರುಸೈಕಲನ ಹಿಂದುಗಡೆಯಿಂದ ಡಿಕ್ಕಿ ಹೊಡೆದಿರುವ ಕಾರಣ ಅಪಘಾತವಾಗಿಯಿತು ಎಂದು ಉತ್ತರಿಸುತ್ತಾರೆ. ಎಂವಿಐ ವರದಿಯ ಪ್ರಕಾರ ಮೋಟಾರುಸೈಕಲ ಹಿಂದುಗಡೆ ಜಖಂಗೊಂಡಿಲ್ಲ ಮುಂದಿನ ಭಾಗ ಜಖಂಗೊಂಡಿರುವ ಕಾರಣ ಅಪಘಾತವು ಮುಂದಿನಿಂದ ಡಿಕ್ಕಿ ಹೊಡೆದ ಕಾರಣ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಪತಿ ಹೆಲ್ಮೇಟ ಹಾಕಿರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಆಸ್ಪತ್ರೆಗೆ ಹೋಗುವಾಗ ಸಹ ಹೆಲ್ಮೆಟ ಹಾಕಿದ್ದು ಇತ್ತು ಎಂದು ಉತ್ತರಿಸುತ್ತಾರೆ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತಿಯ ತಪ್ಪಿನಿಂದ ಅಪಘಾತವಾದರೂ ಸಹ ಬಸ್ಸ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಿಮಿನಲ್ ಪ್ರಕರಣದಲ್ಲಿ ನನ್ನ ಪತಿ ಮೋಟಾರುಸೈಕಲನಿಂದ ಸ್ಕಿಡ್ಡಾಗಿ ಬಿದಿದ್ದಾರೆಂದು ಉಲ್ಲೇಖವಿದೆ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ನನ್ನ ಪತಿ ಎಸಡಿಎಂ ಆಸ್ಪತ್ರೆಯಲ್ಲಿ ದಿಃ27-01-2021 ರಿಂದ 03-02-2021 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ ಎನ್ನುವ ವಿಷಯ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳು ಖೊಟ್ಟಿ ಮತ್ತು ಸ್ಪಷ್ಟೀಕರಣ

ಮಾಡಿರುವ ಖೊಟ್ಟಿ ದಾಖಲೆಗಳು ಎಂದರೆ ಸರಿಯಲ್ಲ. ಈ ರೀತಿ ಇರುವ ಬಿಲ್ಲುಗಳ ಕ್ರಮ ಸಂಖ್ಯೆ 24 ಮತ್ತು 25 ಬಿಲ್ಲುಗಳು ನನ್ನ ಪತಿ ತೀರಿಕೊಂಡ ಮಾರನೇ ದಿನಾಂಕದು ಎಂದರೆ ಸರಿಯಲ್ಲ.

ಶವ ಪಂಚನಾಮೆಯಲ್ಲಿ ಸಾವಿನ ಕಾರಣ ಅಪಘಾತದಿಂದ ಆಗಿರಬಹುದು ಎಂದು ಉಲ್ಲೇಖವಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅಪಘಾತದಿಂದಲೇ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ನನ್ನ ಪತಿ ತೀರಿಕೊಂಡ ಮಾರನೆ ದಿನ ಶವ ಪಂಚನಾಮೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಶವ ಪಂಚನಾಮೆಯಲ್ಲಿ ಸಾವಿನ ಕಾರಣ ನಾವೇ ಒತ್ತಾಯ ಪೂರ್ವಕವಾಗಿ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಎಸಡಿಎಂ ಆಸ್ಪತ್ರೆಯವರು ಅಪಘಾತದ ನಂತರ ನನ್ನ ಗಂಡನಿಗೆ ಗಾಯದ ಪ್ರಮಾಣಪತ್ರವನ್ನು ಸಹ ಒದಗಿಸಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರಲಾರದ ಕಾರಣ ಮತ್ತು ಬಸ್ಸಿಗೆ ಎಫಸಿ ಮತ್ತು ಘರ್ಮಿಟ ಇರಲಾರದ ಕಾರಣ, ವಿಮೆ ಷರತ್ತು ಉಲ್ಲಂಘನೆ ಮಾಡಿರುವ ಕಾರಣ 2ನೇ ಎದುರುದಾರರು ಪರಿಹಾರ ಹಣ ಕೊಡಲು ಬಾದ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿದ್ದರೂ ಸಹ ಈ ರೀತಿ ಪರಿಹಾರ ಹಣ ಸಲುವಾಗಿ ಸುಳ್ಳು ಪ್ರಮಾಣಪತ್ರದ ಮೂಲಕ ಸುಳ್ಳು ಸಾಕ್ಷ್ಯಗಳೊಂದಿಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಎಲ್ಲ ಸಲಹೆಗಳು ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ